ಮಾಡೋನಲ್ಲ ನಾನು. ಅಂತಾ ದುರ್ಬುದ್ಧಿ ನಂಗಿಲ್ಲ..

ಒಳಗೆ ಅದುಮಿಟ್ಟ ಹಬೆಯನ್ನು ಇನ್ನು ತಾಳಿಕೊಳ್ಳೆನೆನ್ನುವಂತೆ ಸುಂಯ್ಯನೆ ವಿಷಲ್ ಹಾಕಿತು ಕುಕ್ಕರ್. ಒಂದು, ಎರಡು, ಮೂರು.., ಒಲೆ ಉರಿಯನ್ನು ಸಣ್ಣಗಾಗಿಸಿ ಮಗನ ಕಡೆ ತಿರುಗಿದ ರಾಮಚಂದ್ರ.

ಅಕ್ಷತೆ ಕೊಟ್ಟು ಕರೆಯೋಕೆ ಬಂದಿದೀಯಾ? ಆಗ್ಲಿ, ಆಗ್ಲಿ, ದೇವ್ರು ಒಳ್ಳೇದು ಮಾಡ್ಲಿ..

ಇನ್ನೂ ಅಲ್ಲೀವರೆಗೆ ಬಂದಿಲ್ಲಾಂತ ಹೇಳಿದ್ನಲ್ಲ.. ಅಪ್ಪಾ.. ಎನ್ನುವ ಸಂಭೋಧನಾತ್ಮಕ ಪದ ಗಂಟಲು ದಾಟಿ ಹೊರ ಬರಲು ಹಿಂಜರಿಯುತ್ತಿದೆ. ಹುಟ್ಟಿದಾರಭ್ಯ ಆ ಪದವನ್ನು ಉಪಯೋಗಿಸದಿದ್ದವನಿಗೆ ಹಿಡಿದು ಬಿಟ್ಟಂತಾಗುವುದರಲ್ಲಿ ವಿಶೇಷವೇನಿದೆ?

ಮತ್ತೆ? ನಿನ್ನಕ್ಕನ ಮದುವೆ ಎಲ್ಲೀವರೆಗೆ ಬಂದಿದೆ? ಹಾಸ್ಯವಾಗಿ ಎನ್ನುವಂತೆ ವಿಚಾರಿಸಿದ ರಾಮಚಂದ್ರ.

ಇನ್ನೂ ನಿಶ್ಚಿತಾರ್ಥನೇ ಆಗಿಲ್ಲ. ಹುಡುಗನ ಮನೆಯೋರದ್ದು ಒಂದು ಕಂಡೀಷನ್ ಉಂಟು..

ವರದಕ್ಷಿಣೆಗೆ ಡಿಮ್ಯಾಂಡಾ?

ಛೇ ಛೇ, ದುಡ್ಡುಕಾಸಿಗೆ ಅವರು ಬಾಯಿ ಬಿಡ್ತಿಲ್ಲ. ಹುಡುಗನಿಗೆ ತುಂಬಾ ಇಷ್ಟವಾಗಿದಾಳೆ ಅಕ್ಕ..

ಮತ್ತೆ?

ನಿಶ್ಚಿತಾರ್ಥಕ್ಕೆ, ಧಾರೆ ಎರೆದು ಕೊಡೋಕೆ ಹುಡುಗಿ ಅಪ್ಪ ಹಸೆಮಣೆ ಮೇಲೆ ಕೂರ್ಬೇಕು ಅಂತಿದಾರೆ..

ನಿಮ್ಮಮ್ಮ ಎಲ್ಲಾ ವಿಷಯ ಹೇಳ್ಲಿಲ್ವಾ?

ಏನೋಪ್ಪ, ಅವರಿಗೆ ನಮ್ಮನೆ ಕತೆ ಹೇಳಾಯ್ತು. ಆದ್ರೆ ನೆಂಟರಿಷ್ಟ್ರಿಗೆ ಉತ್ತರ ಕೊಡೋದು ಕಷ್ಟವಾಗುತ್ತೆ ಅಂತಿದಾರೆ. ಮದುವೆಗೆ ಬರೋರಿಗೆ ಒಳಗಿನ ಹುಳುಕು ಯಾಕೆ ಗೊತ್ತಾಗ್ಬೇಕು ಅಂತ ಅವರ ವಾದ..

..

ನೀವು ದೊಡ್ಡ ಮನಸ್ಸು ಮಾಡಿ ಹಸೇಮಣೆ ಮೇಲೆ ಕೂತ್ಗಂಡು ಅಕ್ಕನ್ನ ಧಾರೆ ಎರೆದು ಕೊಡ್ಬೇಕು ಅಂತ ಅಮ್ಮ ಹೇಳಿ ಕಳ್ಸಿದಾಳೆ. ಅದಕ್ಕೂ ಮುಂಚೆ ನಿಶ್ಚಿತಾರ್ಥದ ಶಾಸ್ತ್ರಕ್ಕೂ ಬರ್ಬೇಕಂತೆ..

..

ನೀವು ಒಪ್ತೀರೋ ಇಲ್ವೋಂತ ಅಮ್ಮಂಗೆ ಹೆದರಿಕೆ ಹತ್ಗಂಡಿದೆ. ಒಂದು ಒಳ್ಳೇ ಸಂಬಂಧ ಸಿಗೋದು ಎಷ್ಟು ಕಷ್ಟ ಅಂತ ನಿಮಗೆ ಗೊತ್ತಿರುತ್ತೆ ಅಂದ್ಗಂಡಿದಾಳೆ.. ಇಷ್ಟು ಹೇಳಿದ ಮೇಲೆ ನಾಲಿಗೆ ಕಚ್ಚಿಕೊಂಡ ಪದ್ಮನಾಭ. ಬಾಯಿ ಜಾರಿ ಮಾತಾಡಿದ್ದು ಹೆಚ್ಚಾಗಿ ಹೋಯ್ತಾ? ಅದು ಆಗಿದ್ದೂ ಹಾಗೇ.

ಹೌದ್ನೌದು, ಒಂದು ಒಳ್ಳೇ ಸಂಬಂಧ ಸಿಗೋದು ಎಷ್ಟು ಕಷ್ಟ ಅಂತ ನನ್ನಷ್ಟು ಚೆನ್ನಾಗಿ ಇನ್ಯಾರಿಗೆ ಅನುಭವ ಆಗಿರುತ್ತೆ? ಸಂಬಂಧ ಒಳ್ಳೇದೇ ಆಗಿದ್ರೂ ಅದನ್ನ ಎಂತಾ ಪರಿಸ್ಥಿತೀಲೂ ನಿಭಾಯಿಸ್ಕೊಂಡು ಹೋಗೋಕೆ ಮನಸ್ಸು ದೊಡ್ಡದಾಗಿರ್ಬೇಕು. ಹಿತ್ತಾಳೆ ಕಿವಿ ಆಗಿದ್ರೆ ಭಾರೀ ಕಷ್ಟ..

..

ಪಾಪ, ನಿನ್ಹತ್ರ ಇಂತಾ ಮಾತಾಡಿದ್ರೆ ನಿಂಗೆ ಅರ್ಥ ಆಗೋಕೆ ಸಾಧ್ಯಾನೇ ಇಲ್ಲ. ಬಿಡು ಆ ವಿಷಯ..

ಹಂಗಾರೆ ನೀವು ಹಸೆಮಣೆ ಮೇಲೆ ಕೂರೋಕೆ ಬರ್ತೀರಿ ಅಲ್ವಾ? ಅಕ್ಕನ ಮದುವೆ ಸಲೀಸಾಗಿ ನಡೆಯುತ್ತೆ ಅಲ್ವಾ?

ತಡಿಯೋ ಹುಡುಗಾ, ಅಷ್ಟು ಅವಸರ ಮಾಡ್ಬೇಡ. ಹದಿನೇಳು ವರ್ಷಗಳಿಂದ ಕಡಿದು ಹೋಗಿರೋ ಸಂಬಂಧಕ್ಕೆ ಅಷ್ಟು ಬೇಗ ಬೆಸುಗೆ ಹಾಕಿ ಸರಿ ಮಾಡೋದು ಆಟ ಅಂದ್ಗಂಡಿದೀಯಾ? ಮನಸ್ಸಿಗೆ ಸಂಬಂಧಪಟ್ಟ ವಿಷಯ ನಿನ್ನ ವಯಸ್ಸಿನೋರಿಗೆ ಗೊತ್ತಾಗಲ್ಲ..

ಹಂಗನ್ಬೇಡಿ ಅಪ್ಪಾ.. ಬೆಣ್ಣೆ ಹಚ್ಚುವ ಕಿಂಚಿತ್ ಯೋಚನೆಯೂ ಇಲ್ಲದೆ ಅಸಹಾಯಕತೆ ಅಪ್ಪಾ.. ಎಂದು ಕರೆಸಿತೇ? ಹೊರಡುವಾಗ ಅಕ್ಕ ಉಣುಗೋಲಿನವರೆಗೂ ಬಂದು ಬೀಳ್ಕೊಟ್ಟಿದ್ದಳು. ಏನಾರಾಗ್ಲಿ, ನೀನು ಈ ಕೆಲಸ ಮಾಡ್ಕಂಬರ್ಬೇಕು ಕಣೋ. ಈ ಮದುವೆ ಆಗ್ಲಿಲ್ಲ ಅಂದ್ರೆ ಇನ್ಯಾರನ್ನೂ ಮದುವೆ ಆಗಲ್ಲ ನಾನು. ಬಾವಿ ಹಾರಿ ಪ್ರಾಣ ಕಳ್ಕಂತೀನಿ.. ಎನ್ನುತ್ತೆನ್ನುತ್ತಾ ಕಣ್ಣೀರಾಗಿದ್ದಳು.

ಒಳ್ಳೇ ಕೆಲಸಕ್ಕೆ ಹೊರಟಿರ್ಬೇಕಾದ್ರೆ ಅಪಶಕುನದ ಮಾತಾಡ್ಬೇಡ್ವೇ.. ಅಕ್ಕನ ಕೈ ಅದುಮಿ ಸಾಂತ್ವನದ ಮಾತಾಡಿದ್ದ ಪದ್ಮನಾಭ, ಹಿರೀ ಮನುಷ್ಯನಂತೆ.

ನಿನ್ಮೇಲೆ ಅಷ್ಟು ಲವ್ವು ಇರೋದಾದ್ರೆ ಮನೆಯೋರನ್ನ ಒಪ್ಪಿಸೋಕೆ ಭಾವಂಗೆ ಬರಲ್ವಾ? ಅದ್ಯಾರೋ ಮಕಾನೇ ನೋಡ್ದಿರೋ ಅಪ್ಪ ಅನ್ನೋ ಮನುಷ್ಯ ನಿನ್ನ ಮದುವೆಗೆ ಬರ್ಬೇಕು ಅಂತ ಹಟ ಯಾಕೆ? ಇನ್ನೂ ಭಾವ ಆಗದೇ ಇರುವವನನ್ನು ಭಾವ ಎಂದೇ ಸಂಭೋದಿಸಿ ತನ್ನ ಮನಸ್ಸು ಗೀರುತ್ತಿದ್ದ ಪಾಯಿಂಟನ್ನು ಅಕ್ಕನೆದುರು ಬಿಚ್ಚಿಟ್ಟಿದ್ದ ಪದ್ಮನಾಭ. ತನ್ನ ಮನ ಮೆಚ್ಚಿದವನನ್ನು ತಮ್ಮ ಭಾವ.. ಎಂದು ಕರೆದಿದ್ದು ಪೂರ್ಣಿಮನಿಗೆ ಹಿತವಾಗಿತ್ತು. ಅವಳು ದೊಡ್ಡಮನುಷ್ಯಿಯಂತೆ ಹೇಳಿದ್ದಳು.

ಒಪ್ಪಿಸೋದು, ಬಿಡೋದು ಅನ್ನೋ ಪ್ರಶ್ನೆ ಅಲ್ಲ ಕಣೋ. ಕೊನೇವರೆಗೂ ಒಂದು ಮಾತು ನಿಲ್ಬಾರ್ದು ನೋಡು. ಆ ಮನೆಯೋರಿಗೆ ಎಲ್ಲಾ ಶಾಸ್ತ್ರಪ್ರಕಾರ ನಡೀಬೇಕು ಅಂತ ಹಟ. ಮದುವೆಗೆ ಬಂದೋರಿಗೆ ಉತ್ತರ ಕೊಡೋ ಹಾಗಾಗ್ಬಾರ್ದು ಅಂತ ಎಚ್ಚರಿಕೆ..

ಆಯ್ತು ಕಣೇ, ನನ್ನ ಕೈಲಾದ ಪ್ರಯತ್ನ ನಾನು ಮಾಡ್ತೀನಿ ಅಕ್ಕನಿಗೆ ಹೇಳಿ ಬಂದಿದ್ದ ಪದ್ಮನಾಭ. ನೆಂಟರಿಷ್ಟರು ಬೇಕಾದಷ್ಟು ಜನ ಇದ್ದರೂ ತನ್ನನ್ನೇ ಸಂಧಾನಕ್ಕೆ ಕಳಿಸಲು ಅಮ್ಮ ತೀರ್ಮಾನಿಸಿದ್ದರ ಹಿಂದೆ ಒಂದು ಮುಂದಾಲೋಚನೆ ಇರಬಹುದೆಂದು ಅವನ ತರ್ಕ. ತನ್ನಷ್ಟುದ್ದ ಬೆಳೆದು ನಿಂತಿರುವ ಮಗನನ್ನು ನೋಡಿದರೆ ಅಪ್ಪನ ಅಂತರಂಗ ಕರಗಿ ಬಿಡುತ್ತದೆ ಎಂದು ಅವಳು ಯೋಚಿಸಿರಬಹುದೇ? ಇರಬಹುದೇನೋ. ರಾಮಚಂದ್ರ ಅರೆಯುವ ಕಲ್ಲು ತೊಳೆದು ಹುಳಿಗೆ ಮಸಾಲೆ ಅರೆಯಲು ಕೂತುಕೊಂಡ.

ಮಿಕ್ಸರ್ ಅಂತ ಇರೋದು ಚಂದಕ್ಕೆ. ಯಾವಾಗ ನೋಡಿದ್ರೂ ಕರೆಂಟ್ ಇರಲ್ಲ ಅಂದ. ಅಪ್ಪ ಮಾತು ಬದಲಾಯಿಸುತ್ತಿದ್ದಾನಾ? ಪದ್ಮನಾಭನಿಗೆ ಚಡಪಡಿಕೆ. ಹಳಿ ತಪ್ಪಿದ ವಿಷಯವನ್ನು ಮತ್ತೆ ಹಳಿಗೆ ತರಬೇಕೆಂಬ ಆತುರ. ಎಲ್ಲಾ ಬೇಗ ಬೇಗ ತೀರ್ಮಾನವಾಗಿಬಿಟ್ಟರೆ ಊಟ ಆಗುತ್ತಿದ್ದಂತೆ ಕೈ ಬೀಸಿಕೊಂಡು ಹೊರಟು ಬಿಡುವುದೇ. ಅಮ್ಮನ ಎದುರು ಹೋಗಿ ನಿಂತು ಸಂಧಾನ ಯಶಸ್ವಿಯಾಗಿದ್ದನ್ನು ಹೇಳುವಾಗ ತಲೆಯ ಮೇಲೆ ಕೋಡು. ಪರವಾಗಿಲ್ಲ ಮಾರಾಯಾ.. ಅಮ್ಮ ಹೊಗಳಿಕೆ ಹಾಕಿದರೆ, ಅಕ್ಕನ ಕಣ್ಣುಗಳು ಹೊಳೆಹೊಳೆಯುತ್ತಾ..

ಇಲ್ಲ, ತಾನಂದುಕೊಂಡಷ್ಟು ಸಲೀಸಲ್ಲ ಮನುಷ್ಯ. ಬಿಗಿಯಾಗಿದ್ದಾನೆ. ಗಡಬಡ ಗಡಬಡ ಅರೆಯುವ ಗುಂಡನ್ನು ಉರುಳಿಸುತ್ತಾ ಆ ಕೆಲಸದಲ್ಲಿ ತನ್ಮಯನಾಗಿ ಇವನ ಇರವನ್ನು ಮರೆತವನಂತೆ ನಟನೆ ಮಾಡುತ್ತಿದ್ದಾನೆ. ಈ ಕುರಿತಾಗಿ ಯೋಚನೆ ಮಾಡುತ್ತಿರಬಹುದೇ? ಇರಬಹುದು..

ಕರಿಬೇವಿನ ಎಲೆಗಳಿರುವ ಕಡ್ಡಿಯನ್ನು ಇಡಿ ಇಡಿಯಾಗಿ ಬೆಂಕಿಯ ಕಾವಿಗೆ ಹಿಡಿದು ಬಾಡಿಸಿ ಕುದಿಯುತ್ತಿರುವ ಹುಳಿಯಲ್ಲಿ ಅದ್ದಿದ್ದಾಯ್ತು. ಇಂಗಿನ ಒಗ್ಗರಣೆ ಕೊಟ್ಟು ಅಡಿಗೆ ಮನೆಯಲ್ಲಿ ಘಮಲು ಎಬ್ಬಿಸಿದ್ದಾಯ್ತು. ಆ ಪರಿಮಳಕ್ಕೇ ನಾಲಿಗೆಯಲ್ಲಿ ಜೊಲ್ಲೊಳಿಯುವಂತಾದರೂ ಬಂದ ಕೆಲಸ ನಿರ್ಧಾರವಾಗದಿದ್ದುದು ಪದ್ಮನಾಭನಿಗೆ ಅತಂತ್ರ ಸ್ಥಿತಿಯಲ್ಲಿ ಕೂತಂತಾಗಿತ್ತು. ಅವನನ್ನು ಅವನಷ್ಟಕ್ಕೆ ಬಿಟ್ಟು ತನ್ನ ಕೆಲಸದಲ್ಲಿ ಮಗ್ನನಾಗಿದ್ದ ರಾಮಚಂದ್ರ. ಅಡುಗೆಯ ಕಲಾಪ ಸಾಂಗವಾಗುತ್ತಿದ್ದಂತೆ ಮಗನೊಡನೆ ಕೇಳಿದ,

ಊಟ ಮಾಡ್ತೀಯಾ, ಅಥ್ವಾ ಇನ್ನೊಂಸ್ವಲ್ಪ ತಡೀತೀಯಾ?

ಊಟ ಮಾಡಿದ್ರಾಯ್ತು ನಿಧಾನಕ್ಕೆ. ನನ್ನ ಪ್ರಶ್ನೆಗೆ ಉತ್ತರ ಕೊಡ್ಲಿಲ್ಲ ನೀವು..

ನಾನು ಉತ್ತರ ಕೊಟ್ಟಿದೀನಿ. ನೀನು ಅರ್ಥ ಮಾಡ್ಕಣ್ಲಿಲ್ಲ

ಅಂದ್ರೆ?

ಹೇಳ್ಲಿಲ್ಲನೋ? ಮುರಿದ ಸಂಬಂಧಕ್ಕೆ ಬೆಸುಗೆ ಹಾಕೋದು ಅಂದ್ರೆ ಸಲೀಸಲ್ಲ. ಮಸಲಾ ಹುಡುಗನ ಕಡೆಯೋರು ಹಿಂಗಿದ್ದೊಂದು ಕಂಡೀಷನ್ ಹಾಕ್ದಿದ್ರೆ ನನ್ನ ನೆನಪಾದ್ರೂ ನಿಮಗೆ ಬರ್ತಿತ್ತಾ? ಕೊನೇಪಕ್ಷ ಒಂದು ಮದುವೆ ಪತ್ರಿಕೇನಾದ್ರೂ ನನ್ನವರೆಗೆ ತಲುಪಿಸ್ತಿದ್ರಾ? ಎದೆ ಮುಟ್ಕಂಡು ಹೇಳು..

ಸತ್ಯಕ್ಕಾರೂ ನಂಗೆ ಗೊತ್ತಾಗ್ತಿಲ್ಲ. ಅದೆಲ್ಲಾ ಅಮ್ಮಂಗೆ ಬಿಟ್ಟಿದ್ದು..

ನೋಡೋ ಹುಡುಗಾ, ನಿನ್ನಮ್ಮ ಏನೂಂತ ನಿಂಗಿಂತಾ ಚೆನ್ನಾಗಿ ನಂಗೆ ಗೊತ್ತಿದೆ. ಅವಳಿಗೆ ಸ್ವಂತ ಬುದ್ಧಿ ಅನ್ನೋದು ನಯಾಪೈಸೆ ಇಲ್ಲ. ಹೇಳಿದೋರ ಮಾತಿಗೆ ಕಿವಿ ಜೋಲು ಬಿಡ್ತಾಳೆ..

**(ಸಶೇಷ)**